ದಿನಾಂಕ: 01.04.2022 ರಂದು ಬೆಳಗ್ಗೆ 10.30 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 99 ರಲ್ಲಿ ಶ್ರೀ ಹೆಚ್.ವಿ. ಅಶ್ವತ್ಥ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಹೆಚ್.ವಿ. ಅಶ್ವತ್ಥ, ನೋಡಲ್ ಅಧಿಕಾರಿಗಳು
2. ಶ್ರೀ ಸುಭಾಸ್ ಪಾಟೀಲ್, ಸಹಾಯಕ ಅಭಿಯಂತರರು, ವಾರ್ಡ್ ನಂ. 99
3. ಶ್ರೀ ರಮೇಶ್, ಪಶು ಇಲಾಖೆ
4. ಶ್ರೀ ಆನಂದ್.ಹೆಚ್.ವಿ. ಬೆಸ್ಕಾಂ ಎಇ
5. ಶ್ರೀ ಆನಂದಮೂರ್ತಿ, ಬೆಸ್ಕಾಂ ಅಭಿಯಂತರರು
6. ಶ್ರೀ ಶ್ರೀನಾಥ್, ಅರಣ್ಯ ಇಲಾಖೆ
7. ಶ್ರೀಮತಿ ದಿವ್ಯಾ ಹಿರಿಯ ಆರೋಗ್ಯ ಪರಿವೀಕ್ಷಕರು
8. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
9. ಶ್ರೀ ಮಲ್ಲಿಕಾರ್ಜುನ್, ಬಿ.ಡಬ್ಲ್ಯೂ.ಎಸ್.ಎಸ್.ಬಿ.
10. ಶ್ರೀ ದರ್ಶನ್. ಮಾರ್ಷಲ್
11. ಶ್ರೀ ಉಮೇಶ್, ಸದಸ್ಯರು
12. ಶ್ರೀ ಆನಂದ್
13. ಶ್ರೀ ರಾಜಣ್ಣ, ಸದಸ್ಯರು,
14. ಶ್ರೀ ನಾಗರಾಜ್
15. ಶ್ರೀ ಶ್ರೀನಿವಾಸ್

ದಿನಾಂಕ: 01.04.2022 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್ ನಂ. 99 ರಾಜಾಜಿನಗರದ ಡಾ: ಅಬ್ದುಲ್ ಕಲಾಂ, ಸಭಾಂಗಣದಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ವಾರ್ಡ್ ನಂ. 99ರ ಮಂಜುನಾಥನಗರ 2ನೇ ಫೇಸ್ ವ್ಯಾಪ್ತಿಯಲ್ಲಿ ಡಾಂಬರೀಕರಣ ಮಾಡಿದ ಗುತ್ತಿಗೆದಾರರಿಂದ ರಸ್ತೆಯನ್ನು ಸ್ವಚ್ಛಗೊಳಿಸಿದ ಮಣ್ಣನ್ನು ತೆಗೆಸುವಂತೆ ಚರ್ಚಿಸಲಾಯಿತು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ವಾರ್ಡಿನ ಅಭಿಯಂತರರಿಗೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು.
2. ವಾರ್ಡ್ ನಂ. 99ರ ಮುಖ್ಯ ರಸ್ತೆಗಳಲ್ಲಿ ಡಾಂಬರೀಕರಣ ಕಾಮಗಾರಿಯನ್ನು ಮೇಜರ್ ರೋಡ್ಸ್ ರವರು ಕೈಗೊಂಡಿದ್ದು, ರಸ್ತೆ ಬದಿಗಳಲ್ಲಿ ಸ್ವಚ್ಛಗೊಳಿಸಿದ ಮಣ್ಣನ್ನು ಹಾಗೆಯೇ ಪಾದಚಾರಿ ಮಾರ್ಗದಲ್ಲಿ ಬಿಟ್ಟಿದ್ದು, ಅದನ್ನು ತೆಗೆಸುವಂತೆ ಚರ್ಚಿಸಲಾಯಿತು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ವಾರ್ಡಿನ ಅಭಿಯಂತರರಿಗೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು.
3. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕಸದ ಪಾಯಿಂಟ್ ನಲ್ಲಿ ಮಣ್ಣನ್ನು ಬೇರ್ಪಡಿಸಿ, ತೆರವುಗೊಳಿಸುವಂತೆ ಚರ್ಚಿಸಲಾಯಿತು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
4. ಇಂದಿರಾನಗರ ಸ್ಲಂನ 2ನೇ ಕ್ರಾಸ್ ನಲ್ಲಿ ವಿದ್ಯುತ್ ಕಂಬ ಬದಲಾವಣೆಯ ಬಗ್ಗೆ ಚರ್ಚಿಸಲಾಯಿತು. ವಾರ್ಡ್ ಸದಸ್ಯರು ಸಭೆಯಲ್ಲಿ ಶ್ರೀ ಶಂಕರ್‌ರಾಜ್, ಬೆಸ್ಕಾಂ ಅಭಿಯಂತರರು ಸಭೆಗೆ ಹಾಜರಾಗದೆ ಇರುವ ಬಗ್ಗೆ ಪ್ರಸ್ತಾಪಿಸಿದರು. ಹಾಗೂ ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ವಾರ್ಡ್ ಅಭಿಯಂತರರಿಗೆ ಬೆಸ್ಕಾಂ ಎಇಇ ರವರಿಗೆ ಪತ್ರ ಬರೆಯುವಂತೆ ಸೂಚಿಸಿದರು.
5. ವಾರ್ಡ್ ಬೆಸ್ಕಾಂ ಅಭಿಯಂತರರಾದ ಶ್ರೀ ಆನಂದ್ ಕುಮಾರ್ ರವರು ಸಭೆಯಲ್ಲಿ ಆರ್.ಟಿ.ಓ. ಕಛೇರಿ ಸಂಕೀರ್ಣದಲ್ಲಿ ಟಿ.ಸಿ. ಹತ್ತಿರ ಅರ್ಥಿಂಗ್ ಸಮಸ್ಯೆ ಇದ್ದು, ವಿದ್ಯುತ್ ಎಇಇ ಮತ್ತು ಇಇ ರವರಿಗೆ ಪತ್ರ ಬರೆಯಲು ಕೋರಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
6. ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಸರ್ವಿಸ್ ರಸ್ತೆಯಲ್ಲಿ ವಿದ್ಯುತ್ ಕಂಬ ಬಾಗಿದ್ದು, ಆ ಕಂಬವನ್ನು ಬದಲಾಯಿಸಬೇಕೆಂದು ವಾರ್ಡ್ ಕಮಿಟ್ ಸದಸ್ಯರಾದ ಶ್ರೀ ನಾಗರಾಜ್ ರವರು ಸಭೆಯಲ್ಲಿ ಕೋರಿದರು.
7. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಯಾರಾದರು ರಸ್ತೆಯನ್ನು ಅಗೆದರೆ ಎಫ್.ಐ.ಆರ್. ಮಾಡುವಂತೆ ವಾರ್ಡ್ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು ತಿಳಿಸಿದರು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
8. ನೋಡಲ್ ಅಧಿಕಾರಿಗಳು ವಾರ್ಡ್ ಕಮಿಟಿ ಸಭೆಯನ್ನು ಪ್ರತಿ ತಿಂಗಳು 1ನೇ ಹಾಗೂ 3ನೇ ವಾರಗಳ ಕೆಲಸಗಳ ದಿನದಂದು ನಡೆಸುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.

9. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಒಣಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸುವಂತೆ ಸದಸ್ಯರು ಮತ್ತು ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
10. ವಾರ್ಡ್ ವ್ಯಾಪ್ತಿಯಲ್ಲಿ ಬರುವ ತಿಮ್ಮಯ್ಯ ರಸ್ತೆ , 1ನೇ ಮುಖ್ಯ ರಸ್ತೆ, ಹಾಗೂ 40 ಅಡಿ ರಸ್ತೆಗಳಲ್ಲಿ ಪಾದಚಾರಿ ಮಾರ್ಗಗಳನ್ನು ಅಂಗಡಿ ಮಾಲೀಕರು ಅತಿಕ್ರಮಿಸಿಕೊಂಡಿದ್ದು, ಅದನ್ನು ತೆರವುಗೊಳಿಸಲು ಸಮೂಹಿಕ ತೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ಆರೋಗ್ಯ ಇಲಾಖೆ ಹಾಗೂ ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರು ಎಲ್ಲಾ ಇಲಾಖೆಯವರ ಜೊತೆ ಸಂಪರ್ಕಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
11. ವಾರ್ಡ್ ಸದಸ್ಯರಾದ ಶ್ರೀ ರಾಜಣ್ಣ ರವರು ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿದ್ದು ಅವುಗಳಿಗೆ ಕ್ರಮ ಕೈಗೊಳ್ಳುವಂತೆ ಕೋರಿದರು. ಇದಕ್ಕೆ ಉತ್ತರವಾಗಿ ಪಶು ಇಲಾಖಾ ಅಧಿಕಾರಿಗಳು ಕ್ರಮ ಕೈಗೊಳುವುದಾಗಿ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 99